ಹಾಳಾಗಲೀ. ಸರಿಯಾಗಿ ನೋಡಬಾರದೇ, ಹೋಗಲಿ ನೋಡಲಿಕ್ಕೆ ಆ ಕತ್ತಲೆಯಲ್ಲಿ ಕಂಡರೆ ತಾನೇ! ಕತ್ತಲೆಯೋ, ಅಂಜಿಕೆಯೋ ಏನೇನೋ ಕೂಡಿತ್ತು. ಆಗ. ಇದ್ದರೂ ಇರಬಹುದು ಬಂದಿರಲಿಕ್ಕೂ ಇಲ್ಲ. ಆದರೆ ಭೂತ ಕಾಣಿಸಿಕೊಳ್ಳುವದೇ ಹಾಗೆ. ಅದೆಲ್ಲ ಸುಳ್ಳೆಂದು ತಿಳಿಯುವಾ. ಎಲ್ಲ ಮರೆತುಬಿಡೋಣ. ಛೇ ಸುಳ್ಳು ಅದಲ್ಲ– ನನ್ನ ಭಾವನೆ. ನನಗಾದರೂ ಇಂಥದರಲ್ಲಿ ವಿಶ್ವಾಸ ಬಹಳ. ನನ್ನ ಮಗಳು ಯಾವಾಗಲೂ ಬಯ್ಯುತ್ತಿದ್ದಳು. ಇಂಥ ದೆವ್ವಗಿವ್ವದ ಸುದ್ದಿ ಅವಳಿಗೆ ಆಗುತ್ತಿದ್ದಿಲ್ಲ. ಅದೆಲ್ಲ ಹೋಗಲಿ, ಸುಳ್ಳೆಂದೇ ನಂಬುತ್ತೇನೆ. ಆದರೆ ನನಗೆ ಸಮಾಧಾನವಿಲ್ಲ. ನಮ್ಮೂರಲ್ಲಿ ದೆವ್ವ ಕಂಡವರು ಬೇಕಾದಷ್ಟು ಮಂದಿ ಇದ್ದಾರೆ. ಹೋಗಲಿ ಅದು...

'...ಇವಳ ಪತ್ರವೇಕೆ ಬಂದಿಲ್ಲ? ಬಹಳ ದಿನಗಳಾದವು. ವಾರಕ್ಕೆ ಒಂದು ಪತ್ರ ಬರೆಯುವ ಮಗಳು ಈಗ ಬರೀ ಈ ನಮೂನೆ ಮಾಡಿದರೆ ಹೇಗೆ? ಹೊಸ ಊರು, ಇನ್ನೂ ಹೋದದ್ದೇ ಇಲ್ಲ ಅಂದ ಮೇಲೆ ತೊಂದರೆ ಇದ್ದೇ ಇದೆ. ಕೆಲದಿನವಾದರೂ ಅಲ್ಲಿಯ ಊರು ಹಿಡಿಸಬೇಕು. ಅಲ್ಲಿ ಆ ಅರಿಯದ ಊರಿನಲ್ಲಿ ಪರಿಚಯದವರಾದರೂ ಯಾರು ಇದ್ದವರು? ಹಾಗೆ ಯಾರಾದರೂ ಗುರ್ತು ಪರಿಚಯ ಎಂದು ಇದ್ದರೆ ತ್ರಾಸಾಗುವುದಿಲ್ಲ. ಇದ್ದ, ಅಲ್ಲಿಯೇ ಯಾವದೋ ಒಂದು ಹಳ್ಳಿಯಲ್ಲಿ ನಮ್ಮ ಶ್ಯಾನುಭೋಗ. ಅವನೂ ಇಲ್ಲವಲ್ಲ! ಅವನಾದರೂ ಇದ್ದಿದ್ದರೇ!! ಇದ್ದರೆ ಒಳ್ಳೆಯದಾಗುತ್ತಿತ್ತು. ನನಗೆ ಕಾಳಜಿಯೇ ಇರುತ್ತಿದ್ದಿಲ್ಲ. ನಿಶ್ಚಿಂತ ಇರುತ್ತಿದ್ದೆ. ನನ್ನ ಮಗಳಿಗೆ ಹಾಗೆ ಪರಿಚಯ ಇದೆ. ಇಲ್ಲಿದ್ದಾಗ, ನಮ್ಮ ಮನೆಗೆ ಬರುತ್ತಿದ್ದಾಗ ನನ್ನ ಮಗಳು 'ಅಕ್ಕಾ' ಎಂದು ಕರೆಯುತ್ತಿದ್ದುದು ಕೇಳಿ ತಾನೂ ಹಾಗೆ ಕರೆಯುತ್ತಿದ್ದ ನನಗೆ. ಆದರೆ ನನ್ನ ಮಗಳಿಗೆ ನಾಚಿಗೆ ಸ್ವಲ್ಪ ಹೆಚ್ಚು. ನನಗೂ ಹಾಗೆ ನಾಚಿಕೆ ಇತ್ತಂತೆ. ನಮ್ಮ ಮನೆಯವರು ಯಾವಾಗಲೂ ಹೇಳುತ್ತಿದ್ದರು. ಆಕೆ ಒಬ್ಬಳೇ ಹುಟ್ಟಿದ್ದರೂ ಅಡ್ಡಿಯಿಲ್ಲ; ಎಲ್ಲ ನಾಚಿಕೆ ಕಟ್ಟಿಕೊಂಡೇ ಹೊಟ್ಟೆಯೊಳಗಿಂದ ಬಂದಿದ್ದಾಳೆ. ಆದರೆ ಊರುಬಿಟ್ಟ ಮೇಲೆ ಎಲ್ಲ ಆಗುತ್ತದೆ ತನ್ನಿಂದ ತಾನೇ. ಎಷ್ಟು ದಿನ ಅಂತ ಇದೆಲ್ಲ ಕಟ್ಟಿಕೊಂಡಿರುವದು? ಕಲಿತ ಮಕ್ಕಳಿಗೆ ಹೊತ್ತಿಗೆ ಬೇಕಾದ ಬುದ್ಧಿ ತಾನೇ ಬಂದುಬಿಡುತ್ತದೆ. ತನ್ನ ಕಾಲಿನ ಮೇಲೆ ತಾನೇ ನಿಲ್ಲುವಂತಾದ ಮೇಲೆ ನಾಲ್ಕು ಮಂದಿಯಲ್ಲಿ ಕೂಡಿ ನಡೆಯುವದು ಬಂದರೆ ನನ್ನ ಮಗಳಲ್ಲ ಯಾರಾದರೂ ಕಲಿತೇ ಕಲಿಯುತ್ತಾರೆ. ಈಗಂತೂ ಅವಳು 'ಮಾಸ್ತರಣಿ', ನಾಲ್ಕು ಊರು ನೋಡಿದವಳು, ನಾಲ್ಕು ಮಂದಿಯಲ್ಲಿ ಉಳಿದು ಕಂಡವಳು. ನಾಲ್ಕು ಮಂದಿಗೆ ಬೇಕಾದವಳು ಕಲಿಸಲಿಕ್ಕೂ ಹಾಗೇ ನನ್ನ ಮಗಳು ಬಲು ಹುಷಾರಿಯಂತೆ. ಅದಕ್ಕೆ ಅವಳ ಸಾಹೇಬರೂ ಕೂಡ ಮೆಚ್ಚಿಕೊಂಡಿದ್ದಾರಂತೆ.

'ಅಲ್ಲ, ಆದರೂ ಅವಳಿಗೇನು ಮಳ್ಳು? ಒಂದು ಕಾಗದ ಹಾಕಬಾರದೇ. ಅಷ್ಟೇನು ಕೆಲಸ? ಅದೇನು ಸಂಸಾರವೋ, ತಾಪತ್ರಯವೋ. ನಾಲ್ಕು ಮಂದಿ ಮಕ್ಕಳ ತಾಯಿಯೋ...? ಇದೆಲ್ಲ ಇನ್ನು ಮುಂದೆ ಆಗಬೇಕಾದದ್ದು. ನಾನಂತೂ ಒಂದು ಬರೆಹ ಕಲಿಯದಿದ್ದವಳು. ಇವಳಾದರೂ ಬರೆಯಬಾರದೇ– ಕ್ಷೇಮಸಮಾಚಾರದ ವಿಷಯ. ಏನಪ್ಪಾ ಈ ಹೆಣ್ಣುಮಕ್ಕಳು! ನಾಲ್ಕು ಅಕ್ಷರ ಕಲಿತರೂ ಅಂದ್ರೆ ಯಾರಿಗೂ ಉಪ್ಪು ಹಾಕುವುದೇ ಇಲ್ಲ. ತನ್ನ ಮದುವೆ ತಾನೇ ಮಾಡಿಕೊಳ್ಳುವಷ್ಟು ಮುಂದೆ ಬಂದುಬಿಟ್ಟಿದ್ದಾರೆ. ಈಗಿನ ಕಾಲದ ಹೆಣ್ಣುಮಕ್ಕಳು. ಹಂ. ಶ್ರೀಪಾದರಾಯರ ಮಗಳು ಇಲ್ಲವೇ– ಡಾಕ್ಟರಿಕೆ ಕಲಿಯಲು ಹೋಗಿ ಬರುವಾಗ ಮದುವೆಮಾಡಿಕೊಂಡೇ ಬಂದಿಲ್ಲವೇ? ಇನ್ನೂ ಎಷ್ಟು ಬೇಕು? ಆದರೆ ನನ್ನ ಮಗಳು ಹಾಗಲ್ಲಪ್ಪಾ. ಅವಳು ಊರಿಗೇ ಒಬ್ಬಳು! ಇಲ್ಲ ಈ ವರ್ಷ ಬೇಸಿಗೆಯಲ್ಲಿ ಅವಳ ಮದುವೆ ಮಾಡಬೇಕು ಅಂತ ನನಗೂ ಬಹಳ ಮನಸ್ಸು ಇದೆ. ಹೇಗೋ ಏನೋ! ಅದಕ್ಕೂ ಹೊತ್ತು ಕೂಡಿಬರಬೇಕು. ಹೋಗಲಿ ಅದೆಲ್ಲ– ನನ್ನ ಕೆಲಸ ಬಹಳ ಬಾಕಿ ಬಿದ್ದಿದೆ. ಇಂದೇ ಆಗಬೇಕು ಎಲ್ಲ!!'